# ಕರ್ನಾಟಕ ಸರ್ಕಾರ

ಸಂ. ಜೆಆರ್‌ಓ/ಆಡಳಿತ/90/18-19

ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸೇವೆಗಳ ಆಯುಕ್ತಾಲಯ, ಆನಂದರಾವ್ ವೃತ್ತ,
ಬೆಂಗಳೂರು – 560009
ದಿನಾಂಕ: 10/08/2018

## ಃ ಸೂಚನಾ ಪತ್ರ ಃ

ವಿಷಯಃ 2018-19ನೇ ಸಾಲಿನ ಸಾಮಾನ್ಯ ವರ್ಗಾವಣೆಯ ಕೌನ್ಸಿಲಿಂಗ್ ನಡೆಸುವ ಬಗ್ಗೆ.

*****

ಕರ್ನಾಟಕ ರಾಜ್ಯ ನಾಗರೀಕ ಸೇವಾ (ವೈದ್ಯಾಧಿಕಾರಿಗಳ ಮತ್ತು ಇತರೆ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011ರ ಅಡಿ ರಚಿಸಲಾದ ನಿಯಮಗಳು 2011 ತಿದ್ದುಪಡಿ ನಿಯಮ 2013ರ ಅನುಸಾರ 2018-19ನೇ ಸಾಲಿನ ಸಾಮಾನ್ಯ ವರ್ಗಾವಣೆಯ ಕೌನ್ಸಿಲಿಂಗ್‌ಗೆ ಹಾಜರಾಗಲು ಅಂತಿಮ ಪಟ್ಟಿಯನ್ನು ಪ್ರಕಟಿಸಿದೆ.

ಹಾಗೂ ದಿನಾಂಕಃ 13.08.2018ರ ಬೆಳಗ್ಗೆ 09.00 ಗಂಟೆಗೆ ಸಮಾಲೋಚನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ, ಕುಷ್ಠರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರುಇಲ್ಲಿ ಕೌನ್ಸಿಲಿಂಗ್ ನಡೆಸಲಾಗುವುದು.

ಅಂತಿಮ ಪಟ್ಟಿಯಲ್ಲಿ ಪ್ರಕಟಿಸಿರುವ ವೈದ್ಯಾಧಿಕಾರಿಗಳು/ದಂತ ವೈದ್ಯಾಧಿಕಾರಿಗಳು/ಸ್ನಾತಕೋತ್ತರ ವ್ಯಾಸಂಗದ ಪರೀಕ್ಷೆ ಆಗದಿರುವ/ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಕೌನ್ಸಿಲಿಂಗ್‌ಗೆ ಹಾಜರಾಗಿ ಲಭ್ಯವಿರುವ ಖಾಲಿ ಹುದ್ದೆಗಳಗನುಸಾರ ಸ್ಥಳ ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ಹಾಗೂ ಕೌನ್ಸಿಲಿಂಗ್‌ಗೆ ಹಾಜರಾಗುವ ವೈದ್ಯಾಧಿಕಾರಿಗಳು/ದಂತ ವೈದ್ಯಾಧಿಕಾರಿಗಳು ಕೆ.ಜಿ.ಐ.ಡಿ.ಪಾಲಿಸಿ ಸಂಖ್ಯೆ/ಭಾವ ಚಿತ್ರ ಇರುವ ಗುರುತಿನ ಚೀಟಿ/ಪಾನ್‌ಕಾರ್ಡ/ವಾಹನ ಚಾಲನಾ ಪರವಾನಗಿ ಇವುಗಳಲ್ಲಿ ಯಾವುದಾದರೊಂದನ್ನು ಹಾಜರುಪಡಿಸಬೇಕೆಂದು ಸೂಚಿಸಲಾಗಿದೆ.

"ಕಛೇರಿ ಟಿಪ್ಪಣಿ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ"

G. Leelavathi 10/8

for ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂ.

**ಪ್ರತಿಯನ್ನು ಃ**

ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಗೆ ರವಾನಿಸುತ್ತಾ ಈ ಮಾಹಿತಿಯನ್ನು ಕೂಡಲೇ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.